**ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ**
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**
**PAPER CLIPPINGS**

6

ಇಲಾಖೆ / ವಿಷಯ : DEPARTMENT / SUBJECT: ಸಂಸತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ          ದಿನಾಂಕ : DATE : ೧೪/೯/೨೦೨೦

ಸಹಾಯವಾಣಿ: 8884432666 ● ಸಂಪುಟ 9 ● ಸಂಚಿಕೆ 291

## ಕರೊನಾ ಕಾಲದಲ್ಲೇ ಸಂಸತ್ ಕಲಾಪ



# ಅಧಿವೇಶನದ ಅಗ್ನಿಪರೀಕ್ಷೆ

**ಕೇಂದ್ರ ಸರ್ಕಾರಕ್ಕೆ ಮತ್ತೊಂದು ಸವಾಲು**

ಕರೊನಾ ಮಹಾಮಾರಿಯ ಸಂಕಷ್ಟದ ನಡುವೆಯೇ 18 ದಿನಗಳ ಸಂಸತ್ ಅಧಿವೇಶನ ಸೋಮವಾರ ಆರಂಭಗೊಳ್ಳಲಿದೆ. ಲಸಿಕೆ ಸಿಗುವವರೆಗೂ ಕರೊನಾ ಜತೆಯಲ್ಲೇ ಜೀವನ ಸಾಗಿಸಬೇಕೆನ್ನುವ ಮೂಲಕ ಜನರಲ್ಲಿ ಧೈರ್ಯ ತುಂಬಿದ್ದ ಕೇಂದ್ರ ಸರ್ಕಾರಕ್ಕೀಗ ಅಧಿವೇಶನವನ್ನು ಯಶಸ್ವಿಯಾಗಿ ನಡೆಸುವ ಅಗ್ನಿಪರೀಕ್ಷೆ ಎದುರಾಗಿದೆ. ಸುಗಮ ಕಲಾಪಕ್ಕೆ ರೂಪಿಸಿರುವ ವ್ಯವಸ್ಥೆ, ಕರೊನಾ ಎದುರಿಸಲು ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳ ಜತೆಯಲ್ಲೇ ದೇಶದ ಆರ್ಥಿಕ ಪರಿಸ್ಥಿತಿ, ಚೀನಾ ಗಡಿ ತಂಟೆಯಂತಹ ವಿಚಾರಗಳಲ್ಲಿ ವಿಪಕ್ಷಗಳ ಪಾಟಿಸವಾಲನ್ನು ಸರ್ಕಾರ ಹೇಗೆ ನಿಭಾಯಿಸಲಿದೆ ಎಂಬ ಕುತೂಹಲವೂ ಇಮ್ಮಡಿಗೊಂಡಿದೆ.

### ಪ್ರತಿಪಕ್ಷ ಬೇಡಿಕೆ

ಆರ್ಥಿಕತೆ ಹಿಂಜರಿಕೆ, ಗಡಿ ತಕರಾರು, ನಿರುದ್ಯೋಗ, ಕೃಷಿ ಬಿಕ್ಕಟ್ಟಿನ ಕುರಿತು ಲೋಕಸಭೆಯಲ್ಲಿ ಸುದೀರ್ಘ ಚರ್ಚೆಯಾಗಬೇಕು

### ಸರ್ಕಾರದ ಆದ್ಯತೆ

11 ಸುಗ್ರೀವಾಜ್ಞೆಗಳ ವಿಧೇಯಕಕ್ಕೆ ಅನುಮೋದನೆ ಪಡೆದು ಕಾನೂನಾಗಿ ಪರಿವರ್ತಿಸುವುದು, 23 ಹೊಸ ಮಸೂದೆಗಳಿಗೆ ಅಂಕಿತ ಪಡೆದುಕೊಳ್ಳುವುದು.

### ಏನಿರುವುದಿಲ್ಲ

ಈ ಬಾರಿಯ ಅಧಿವೇಶನದಲ್ಲಿ ಪ್ರಶ್ನೋತ್ತರ ಹಾಗೂ ಶೂನ್ಯವೇಳೆ ಇರುವುದಿಲ್ಲ, ಪ್ರೈವೇಟ್ ಮೆಂಬರ್ ಬಿಲ್‌ಗೂ ಅವಕಾಶವಿಲ್ಲ.

**5 ಸಂಸದರಿಗೆ ಕರೊನಾ**
ಕಲಾಪಕ್ಕೆ ಮೊದಲೇ ಆತಂಕ 08



### ಮುನ್ನೆಚ್ಚರಿಕೆ

- ಸದಸ್ಯರ ಆಸನ ವ್ಯವಸ್ಥೆಯಲ್ಲಿ ಬದಲಾವಣೆ
- ಸಂಸತ್ ಭವನಕ್ಕೆ ಬರುವ ಮುನ್ನ ಕರೊನಾ ಪರೀಕ್ಷೆ ಕಡ್ಡಾಯ
- ಡಿಜಿಟಲ್ ಹಾಜರಾತಿ ಅಪ್ಲಿಕೇಶನ್ ಜಾರಿ
- ಇಡೀ ಸಂಸತ್ ಭವನ ಆವರಣ ಸ್ಯಾನಿಟೈಸ್
- ಸಂಸತ್ ಭವನದ ಎಲ್ಲ ಬಾಗಿಲುಗಳಿಗೆ ಸ್ಪರ್ಶ-ರಹಿತ (ಟಚ್-ಫ್ರೀ) ವ್ಯವಸ್ಥೆ

### ಚೀನಾ ತಂಟೆ ಬಗ್ಗೆ ಹೇಳಿಕೆ

ಕೇಂದ್ರ ಸರ್ಕಾರ ಚೀನಾ ಜತೆಗಿನ ಗಡಿ ಸಂಘರ್ಷದ ವಿಚಾರದ ಬಗ್ಗೆ ಮುಂಗಾರು ಅಧಿವೇಶನದಲ್ಲಿ ಹೇಳಿಕೆ ನೀಡುವ ಸಾಧ್ಯತೆ ಇದೆ. ಭಾನುವಾರ ನಡೆದ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಈ ವಿಚಾರ ಚರ್ಚೆಗೆ ಬಂದಿದೆ.

### ಬದಲಾದ ವ್ಯವಸ್ಥೆ

● ಇದೇ ಮೊದಲ ಬಾರಿ ಪಾಳಿಯಲ್ಲಿ ಕಲಾಪ ● ಮಧ್ಯಾಹ್ನ ಲೋಕಸಭೆ, ಬೆಳಗ್ಗೆ ರಾಜ್ಯಸಭೆ ಕಲಾಪ ● ವಾರಾಂತ್ಯ ರಜೆಯೂ ಇಲ್ಲದೆ ಈ ಬಾರಿಯ ಸಂಸತ್ ಕಲಾಪವನ್ನು ನಿಗದಿಪಡಿಸಲಾಗಿದೆ. ● ಒಟ್ಟು 18 ಬೈಠಕ್‌ಗಳು (ಸಿಟಿಂಗ್) ನಡೆಯಲಿವೆ.